ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ**

**ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1970/2022**

ಸಿ ಡ್ಬ್ಯೂ **-2**

ಪಿಡ್ಬ್ಯೂ **-2**

**ಸಾಕ್ಷಿದಾರರ ಹೆಸರು** ಃ ಮಂಜುನಾಥ ಶಿವಪ್ಪ ಕಡಕೋಳ

**ಸಾಕ್ಷಿದಾರರ ವಯಸ್ಸು** ಃ **38** ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಗ್ರಾಮಲೇಕ್ಕಾಧಿಕಾರಿ

**ಸಾಕ್ಷಿದಾರರ ವಿಳಾಸ** ಃ ಮೆಕಲಮರ್ಡಿ.

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 25.04.2025.**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ದಿನಾಂಕ **27.09.2022** ರಂದು ಅಬಕಾರಿ ಇಲಾಖೆಯವರು ನನ್ನನ್ನು ಕರೆದು ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನನ್ನು ಸಾಕ್ಷಿ ಮಾಡಿಸಿದರು. ಸೋಮೇಶ್ವರ ಶುಗರ್ ಫ್ಯಾಕ್ಟರಿ ಹತ್ತಿರ ಪಂಚನಾಮೆ ಮಾಡಿದರು. ಆಗ ಸಮಯ **04.30** ಆಗಿತ್ತು. ಆರೋಪಿ ಕಡೆಯಿಂದ ಗಾಂಜಾ ವಶಪಡಿಸಿಕೊಂಡರು. ಗಾಂಜಾ **300**ಗ್ರಾಂ ಇತ್ತು. ಅಲ್ಲಿ ಅಬಕಾರಿ ಇಲಾಖೆಯವರು ನಾವು, ಆರೋಪಿಗಳು ಸೇರಿಸಿ **2** ಪೋಟೋ ತೆಗೆದರು. **05.00** ರಿಂದ **06.00** ಗಂಟೆವರೆಗೆ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದುಕೊಂಡರು. ಸಾಕ್ಷಿ ನಿಶಾನೆ ಪಿ **2** ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದ, ಸಾಕ್ಷಿಯ ಸಹಿಯನ್ನು ನಿಶಾನೆ ಪಿ **2**ಬಿ ಎಂದು ಗುರುತಿಸಲಾಯಿತು. **2** ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಶಾನೆ ಪಿ **3** ಮತ್ತು **4** ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿ ಗುರುತಿಸುವರು. ಸಾಕ್ಷಿ ಮುದ್ದೆ ಮಾಲು **1** ನ್ನು ನೋಡಿ ಗುರುತಿಸುವರು.

**ವಾಟೀ ಸವಾಲುಃ ಆರೋಪಿಪರ ಶ್ರೀ ವಕೀಲರಿಂದಃ**

ಬೆಳವಡಿಯಲ್ಲಿ **1.5** ವರ್ಷ ಕೆಲಸ ಮಾಡಿದ್ದೇನೆ. ಸಿದ್ದಸಮುದ್ರ ಗ್ರಾಮವು ಸಹ ಬೆಳವಡಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ನಾನು ಆಗಾಗ ಸಿದ್ದಸಮುದ್ರಕ್ಕೆ ಹೋಗುವ ಪ್ರಸಂಗ ಬರುತ್ತಿರುತ್ತದೆ ಎಂದರೆ ಸರಿ. ಬೆಳವಡಿ ಬಸ್ಸ ನಿಲ್ದಾಣದಿಂದ ಸಿದ್ದಸಮುದ್ರಕ್ಕೆ ಹೋಗುವುದಕ್ಕೆ ಬೆಳವಡಿ ಬುಡರಕಟ್ಟಿ ರಸ್ತೆಯ ದಕ್ಷಿಣಕ್ಕೆ ಅರ್ಧ ಕೀ ಮೀಟರ ದೂರದಲ್ಲಿ ಸಿದ್ದಸಮುದ್ರ ಕ್ರಾಸ ಇರುತ್ತದೆ ಎಂದರೆ ಸರಿ. ಬೆಳವಡಿ ಯಿಂದ ಬುಡರಕಟ್ಟಿ ಗ್ರಾಮವು **6** ಕೀ ಮೀಟರ ದೂರದಲ್ಲಿರುತ್ತದೆ. ಬೆಳವಡಿ ಬಸ್ ನಿಲ್ದಾಣವು ಸೋಮೇಶ್ವರ ಶುಗರ್ ಫ್ಯಾಕ್ಟರಿ **2** ಕೀ ಮೀಟರ ಆಗುತ್ತದೆ. ಸೋಮೇಶ್ವರ ಶುಗರ್ ಫ್ಯಾಕ್ಟರಿ ದಾಟಿದ ನಂತರ **2** ಕೀ ಮೀಟರ ಹೋದ ನಂತರ ದಕ್ಷಿಣಕ್ಕೆ ಸಿದ್ದಸಮುದ್ರಕ್ಕೆ ಹೋಗುವ ಸಲುವಾಗಿ ಕ್ರಾಸ ಬರುತ್ತದೆ ಎಂದರೆ ಸರಿ. ಸೋಮೇಶ್ವರ ಶುಗರ್ ಫ್ಯಾಕ್ಟರಿ ಆಸುಪಾಸು ಸಿದ್ದಸಮುದ್ರಕ್ಕೆ ಹೋಗುವ ಸಲುವಾಗಿ ದಕ್ಷಿಣ ಬಾಜು ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿ. ನಿಶಾನೆ ಪಿ **3** ಮತ್ತು **4** ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಮುಖ್ಯ ದ್ವಾರದ ಬಳಿ ತೆಗೆದ ಪೋಟೋಗಳು ಎಂದರೆ ಸರಿ.

ಪೋಟೋಗಳನ್ನು ಅಬಕಾರಿ ಇಲಾಖೆಯವರು ತೆಗೆದಿರುತ್ತಾರೆ. ಪೋಟೋ ತೆಗೆದಾಗ ಸಮಯ **05.00** ಗಂಟೆಯಾಗಿತ್ತು. ಅಬಕಾರಿ ಇಲಾಖೆಯವರು ಒಟ್ಟು **6** ಜನ ಇದ್ದರು.

ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ ಕರೆಯಲು ಒಬ್ಬರು ಪೊಲೀಸರು ಬಂದಿದ್ದರು ಆಗ ನಾನು ಕಚೇರಿಯಲ್ಲಿದ್ದೇನು. ಸದರಿಯವರು ಬಂದಾಗ ಸಮಯ **04.15** ಆಗಿತ್ತು. ಒಬ್ಬ ವ್ಯಕ್ತಿ ಗಾಂಜಾ ಮಾರುತ್ತಿದ್ದಾನೆ ಎಂದು ಶಂಕೆ ಬಂದಿದೆ, ಅದಕ್ಕೆ ನೀವು ಸಾಕ್ಷಿ ಆಗಲು ಬನ್ನಿ ಎಂದು ಕರೆದರು. ಪೊಲೀಸರು **2** ಜೀಪನಲ್ಲಿ ನನ್ನನ್ನು ಕರೆಯಲು ಬಂದಿದ್ದರು. ನಾನು ನನ್ನ ಬೈಕನಲ್ಲಿ ಹೋದೆನು. ಪೊಲೀಸರು ನಿಮ್ಮನ್ನು ಕರೆಯಲು ಬಂದಿದ್ದರು ನೀವು ಬೈಕ ತೆಗೆದುಕೊಂಡು ಹೋಗಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಂಚನಾಮೆ ಬರೆಯಲು ಪೊಲೀಸರಿಗೆ ನಾನು ಮಾಹಿತಿಯನ್ನು ನೀಡಿರುವುದಿಲ್ಲ. ಆರೋಪಿ ಕಡೆಯಿಂದ **300** ಗ್ರಾಂ ಗಾಂಜಾವನ್ನು ಜಪ್ತಿ ಮಾಡಿರುತ್ತೀರಿ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಸರ್ಕಾರಿ ಇಲಾಖೆಯ ಅಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿರಪರಾಧಿ ವ್ಯಕ್ತಿಯನ್ನು ಸೋಮೇಶ್ವರ ಶುಗರ್ ಫ್ಯಾಕ್ಟರಿ ಮುಂದೆ ನಿಲ್ಲಿಸಿ ಪೋಟೋ ತೆಗೆದು ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಟೋ ತೆಗೆದಿರುತ್ತಾರೆ ಎಂದು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ